ಉತ್ತರ ಬಂತು. 'ಮನೀಗೆ ಬರಾದಿಲ್ಲ, ಬೇಕಾದರ ನಾಟಕ ಕಂಪೆನಿಗೆ ಬರ್ತ್ನಿ' ಅಂತ ಉತ್ತರ ಬರೆದೆ. 'ನೀನು ನಮ್ಮ ನಾಟಕ ಕಂಪನೀಗೂ ಬೇಡ, ಮುಖಾನು ತೋರಿಸ ಬೇಡ' ಅಂತಾ ಮತ್ತೆ ಪತ್ರ ಬರೆದರು. 'ನನಗೆ ನಿಶ್ಚಿತಾರ್ಥ ಮಾಡು ಅಂದವರಾರು? ನಾಟಕದಾಗ ಪಾತ್ರ ಮಾಡಾಕ ಹಚ್ಚಿದವರಾರು' ಮನೆಯವರ ಬಗ್ಗೆ ಒಂದು ರೀತಿಯ ತಿರಸ್ಕಾರ ಹುಟ್ಟಿತು. ಪ್ರಪಂಚಾನ ಗೊತ್ತಿಲ್ಲದ ನನಗೆ ಇಷ್ಟು ಕಷ್ಟ ಕೊಟ್ಟರು. ಇದು 'ದೈವದ ಆಘಾತ' ಎಂದು ಅಂದುಕೊಂಡು ನನಗೆ ನಾನೆ ಮನಸ್ಸಿಗೆ ಸಮಾಧಾನ ಮಾಡಿಕೊಂಡೆ.

**ಏಣಗಿ ಬಾಳಪ್ಪನವರ ಕಂಪನಿಗೆ...**

ಆಗ ದಾವಣಗೆರೆಯಲ್ಲಿ ಏಣಗಿ ಬಾಳಪ್ಪನವರ ನಾಟಕ ಕಂಪನಿ ಪ್ರದರ್ಶನ ನಡೀತಿತ್ತು. ನಮ್ಮ ಕಂಪನಿ ಹಾನಗಲ್ಲಿನಲ್ಲಿತ್ತು. ದಾವಣಗೆರೆಗೆ ಹೋಗಿ ಬಾಳಪ್ಪನವರನ್ನು ಭೇಟಿ ಮಾಡಿದೆ. 'ನೀನು ವೀರಪ್ಪನ ತಂಗಿ ಅಲ್ಲ? ಯಾಕ ಅಳತಿ...' ಅಂತಾ ಕೇಳಿದರು. ನಾನೇನು ಮಾತಾಡಲಿಲ್ಲ. 'ನೀವು ನಾಟಕದಾಗ ಪಾತ್ರ ಕೊಟ್ರ ಮಾಡ್ತನಿ' ಅಂದೆ. 'ನಿಮ್ಮಣ್ಣನೂ ಕಂಪನಿ ನಡಸ್ತಾನು. ನಾನು ಸೇರಿಸಿಕೊಂಡ್ರ ನನಗೆ ಅಪವಾದ ಬರ್ತತಿ. ನಾನು ಬೇಕಿದ್ದರೆ ಕಳಿಸಿ ಬರ್ತ್ನಿ, ಹೋಗು' ಅಂದರು. ಹೋಗದಿಲ್ಲ ಅಂತ ಹಠ ಹಿಡಿದು ಬಾಳಪ್ಪನವರಲ್ಲಿ ಉಳಿದುಬಿಟ್ಟೆ. ಒಂದು ದಿವಸಾ ಬಸವಣ್ಣನ ನಾಟಕದಾಗ ಕಲಾವತಿ ಪಾತ್ರ ಕೊಟ್ರು. ಅವರಿಗೆ ಹಿಡಿಸಿಬಿಡ್ತು. 'ಮೂರು ವರ್ಷ ನಮ್ಮ ಕಂಪನ್ಯಾಗ ಇರ್ತ್ನಿ' ಅಂತ ಬಾಂಡ್ ಬರಕೊಡು ಅಂದರು. ಘಟಪ್ರಭಾ ಆಸ್ಪತ್ರೆಗೆ ಹೋಗಿ ಹೊಟ್ಟೆ ತಗಸಾಣು (ಅಬಾರ್ಶನ್) ಅಂದರು. 'ಶಿಶು ಹತ್ಯೆ ಮಾಡಾಕ ಒಲ್ಲೆ' ಎಂದೆ. ದಾವಣಗೆರೆಯಲ್ಲಿ ಬಾಳಪ್ಪನವರ ಕಂಪನಿ ನಟಿಯಾದೆ.

ಅಲ್ಲಿದ್ದಾಗಲೆ ನನಗೆ ಹೆರಿಗೆಯಾಯಿತು. 10-4-1959ರಲ್ಲಿ ಮಗ ಹುಟ್ಟಿದ. ಆಗ ನಮ್ಮಣ್ಣನವರ ಕಂಪನಿ ಚಿತ್ರದುರ್ಗಕ್ಕೆ ಬಂದಿತ್ತು. ದಾವಣಗೆರೆಯಲ್ಲಿ ಪರಿಚಯದವರು ಹತ್ತು ರೂಪಾಯಿ ಕೊಟ್ಟು ಚಿತ್ರದುರ್ಗದ ಬಸ್ಸಿಗೆ ಹತ್ತಿಸಿದರು. ಮಗನನ್ನು ಹೆತ್ತ ಮಾರನೇ ದಿನವೇ ಕೂಸು ಎತ್ತಿಕೊಂಡು ಚಿತ್ರದುರ್ಗದ ನಾಟಕ ಕಂಪೆನಿ ಬೋರ್ಡಿಂಗ್ ಮನಿಗೆ ಹೋದೆ. ಅಣ್ಣನವರ ಕಂಪನಿಯೂ ಸಂಕಷ್ಟದಲ್ಲಿತ್ತು. ಎಷ್ಟೋ ಹಳ್ಳಿಗಳಲ್ಲಿ ಕಾಳು-ಕಡಿ ಇಸಿದುಕೊಂಡು ನಾಟಕವಾಡುತ್ತಿದ್ದರು. ಊಟ ಕೊಟ್ಟರೆ ಅಷ್ಟಕ್ಕೇ ನಾಟಕ ಆಡುವಂತಹ ಪರಿಸ್ಥಿತಿ ಇತ್ತು. ಚಳ್ಳಕೆರೆ ತಾಲ್ಲೂಕು ಗುಂಡೇರಿಗೆ ನಾಟಕ ಆಡಲಿಕ್ಕೆ ಹೋಗಿದ್ದರು. ನನ್ನ ಹಸೀ ಮಗನಿಗೆ ನಡಕ ಸುರುವಾಯ್ತು. ಕೊಳ್ಳಾಗ ಇದ್ದ ಬೆಳ್ಳಿ ಚೌಕ ಮಾರಿದೆ. ಎರಡು ರೂಪಾಯಿ ಸಿಕ್ತು. ವೈದ್ಯರ ಬಳಿ ತೋರಿಸಿದೆ. ಅಣ್ಣಂದಿರು ಹಳ್ಳಿ ನಾಟಕ ಮುಗಿಸಿಕೊಂಡು ಚಿತ್ರದುರ್ಗಕ್ಕೆ ವಾಪಸ್ ಬಂದರು. 'ನಾಟಕದಾಗ ಪಾತ್ರ ಮಾಡಾಕ ಕೊಡ್ರಿ, ನಿಮ್ಮ ಕಂಪನ್ಯಾಗ ಇರ್ತ್ನಿ' ಅಂತ ಕೇಳಿದೆ. ರೂ150 ಪಗಾರ ನಿಗದಿಪಡಿಸಿ ಪತ್ರ ಬರೆಸಿಕೊಂಡು ನನ್ನನ್ನು ಕಂಪನಿಯಲ್ಲಿ ಇಟ್ಟುಕೊಂಡ್ರು. ಬರವಣಿಗೆ ಇದ್ದರ ಕಂಪನಿ ಬಿಟ್ಟು ಹೋಗಾದಿಲ್ಲ ಎಂಬ ಎಣಿಕೆ ಅವರದು. ಹಸೀ ಬಾಣಂತಿ ಆಗಿದ್ರೂ ಪಾತ್ರ ಮಾಡಾಕ ಸುರು ಮಾಡ್ದೆ. ಆರು ತಿಂಗಳವರೆಗೆ ಮಗನ್ನ ಹಂಗೂ ಹಿಂಗೂ ಸಾಕಿ ದಾವಣಗೆರೆಯ ಮಾಗಾನಹಳ್ಳಿಯವರ ಮನೆತನಕ್ಕೆ ಮದುವೆಯಾಗಿ ಹೋಗಿದ್ದ ಅಕ್ಕ ಗೌರಮ್ಮಳ ಉಡಿಗೆ ಮಗುವನ್ನು ಹಾಕಿ ಬಂದೆ. ಆಕಿಗೆ ಮಕ್ಕಳು ಇರಲಿಲ್ಲ. ಸ್ವಂತ ಮಗನಿಗಿಂತ ಹೆಚ್ಚಾಗಿ ನೋಡಿಕೊಂಡಳು. ನನ್ನ ಮಗನ್ನ ಬೆಳೆಸಿ ದೊಡ್ಡವನನ್ನಾಗಿ ಮಾಡುವ ಎಲ್ಲ ಜವಾಬ್ದಾರೀನ ಆಕಿ ತೆಗೆದುಕೊಂಡು, ಅದರಂತೆ ನನ್ನ ಮಗನನ್ನ ಏನೂ ಕೊರತೆಯಾಗದಂತೆ ವಿದ್ಯಾಭ್ಯಾಸ ಕೊಡಿಸಿ ಬೆಳೆಸಿದಳು. ನನ್ನ ಅಕ್ಕ ಗೌರಮ್ಮ ನನ್ನ ಮಗನ್ನ ತೆಗೆದುಕೊಂಡು ಸಾಕಿದಳು. ಬಹಳ ಹೆಮ್ಮೆಯಿಂದ ನನ್ನ ನಾಟಕ ನೋಡಾಕ ಬರ್ತಿದ್ದಳು. ನನ್ನ ಇಷ್ಟು ಕೀರ್ತಿಗೆ ಅಕೀನಾ ಕಾರಣ.

ಚಿತ್ರದುರ್ಗದ ವೈದ್ಯರು ನನ್ನ ಎರಡು ದಿನದ ಮಗುವನ್ನು ಹಾಗೂ ನನ್ನನ್ನು ಮಾನವವೀಯವಾಗಿ ನೋಡಿಕೊಂಡರು. ಅವರಿಗೆ ನನ್ನ ಮೇಲೆ ಬಾಳಾ ಅಭಿಮಾನ ಮೂಡ್ತು. ನನ್ನನ್ನು 'ರಂಗಭೂಮಿ ರತ್ನ' ಎಂದೇ ಕರೆಯುತ್ತಿದ್ದರು. (ನಾನು ಚೌಕ ಮಾರಿದ್ದು ಅವರಿಗೇನು ಗೊತ್ತಿತ್ತು!) ದುರ್ಗದಲ್ಲಿದ್ದಾಗ ನನ್ನ ನಾಟಕಗಳನ್ನು ನೋಡಾಕ ಬರ್ತಿದ್ರು. ಅವರಿಗೆ ನನ್ನ ಬಗ್ಗೆ ಆಕರ್ಷಣೆ ಉಂಟಾಗಿತ್ತು. ನನಗೂ ಅದು ಗೊತ್ತಾಗಿತ್ತು. ನನ್ನ ವೈಯಕ್ತಿಕ ಬದುಕಿನ ತೀರಾ ಚಿಕ್ಕ ವಯಸ್ಸಿನಲ್ಲಿ ನನ್ನದಲ್ಲದ ತಪ್ಪಿಗೆ ನನಗೆ ಶಿಕ್ಷೆಯಾಗಿತ್ತು. ಒಮ್ಮೆಯಂತೂ ತಾಯಿ ನನ್ನ ಸ್ವಂತ ಅಣ್ಣನ ಮದುವೆಗೇ ಕರೆದೊಯ್ದಿರಲಿಲ್ಲ. ಒಂದರ ಹಿಂದೆ ಒಂದು ಬಿದ್ದ ಹೊಡೆತಗಳಿಂದ ನನ್ನ ಮನಸ್ಸು ಮದುವಿ ಅಂದ್ರ ಕುಗ್ಗಿಹೋಗಿತ್ತು. ಪ್ರಾಯ ಅಂದರ ಮಧ್ಯಾಹ್ನದ ಬಿಸಿಲಿದ್ದಾಂಗ ಅಂತಾ ಆ ನನ್ನ ಚಿಕ್ಕ ವಯಸ್ಸಿಗೆ ಅನಿಸಿಬಿಟ್ಟಿತ್ತು. ವೈದ್ಯರು ಇಷ್ಟ ಪಟ್ಟರೂ ಯಾಕೋ ಅವರಿಂದ ನಾನು ದೂರಾದೆ. ಅವರಿಗೆ ಇದ್ದ ಆಕರ್ಷಣೆ ನನ್ನ ಸುಪ್ತ ಮನಸ್ಸಿನೊಳಗ ಉಳಿದುಬಿಟ್ಟಿತ್ತು. ಏಳು ವರ್ಷಗಳ ನಂತರ ಅವರ ಬಳಿ ಹೋದೆ. ಆದರೆ ಅವಾಗ ಅವರು ಒಪ್ಪಲಿಲ್ಲ. 'ನಿನ್ನ ಗುಣಕ್ಕ ನಾನು ಎಲ್ಲಿ ಇದ್ದರೂ ಸಹಾಯ ಮಾಡ್ತೀನಿ, ಆದರೆ ನಿನ್ನ ಫೈಲು ಎಲ್ಲೂ ಕೆಡಿಸಿಗ್ಯಾ ಬ್ಯಾಡ' ಅಂತ ಹೇಳಿದರು. ನನ್ನ ವೈಯಕ್ತಿಕ ಬದುಕಿನ ಮೊದಲ ಗುರು ಅವರು ಎನಿಸಿತು. ನಾನಾಗಿಯೇ ಏನನ್ನೂ ಬಯಸಲಿಲ್ಲ. ಆದರೆ ಜೀವನದಲ್ಲಿ ಒಮ್ಮೆ ಮಾತ್ರ ನಾನು ಬಯಸಿ ಹೋದಾಗ ಅದು ದೊರೀಲಿಲ್ಲ. ಇಲ್ಲಿಂದ ನನ್ನ ಮನಸ್ಸು ಕಲ್ಲಾಯಿತು.



**ಪೊಲೀಸನ ಮಗಳು... ನಟ ಮೌಲಾಸಾಬ ಅವರೊಂದಿಗೆ**

## ಲೀಲಾ ಪರಿವಾರದ ಹೆಜ್ಜೆ ಗುರುತು...

ತಂದೆ ಅಣ್ಣಿಗೇರಿ ಶಾಂತವೀರಪ್ಪನವರು ಸ್ಥಾಪಿಸಿ (1928) ಐವರು ಅಣ್ಣಂದಿರು ಮುಂದುವರಿಸಿಕೊಂಡು ಬಂದ ಕೆಬಿಆರ್ ಡ್ರಾಮಾ ಕಂಪೆನಿಯ ಎಲ್ಲ ಏಳು ಬೀಳುಗಳ ಜತೆಗೆ ಕಲಾವಿದೆಯಾಗಿ ಬಾಲ್ಯದಿಂದಲೇ ಹೆಜ್ಜೆ ಹಾಕಿದವರು ಚಿಂದೋಡಿ ಲೀಲಾ. ಮಾಜಿ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರಿಂದಲೇ ತಮ್ಮ ನಾಟಕ ಕಂಪೆನಿಯ 80ನೇ ವರ್ಷದ ಅಮೃತ ಮಹೋತ್ಸವ ಆಚರಿಸಬೇಕು ಎಂದು ಕಳೆದ ಎರಡು ವರ್ಷಗಳಿಂದ ಕನಸು ಕಂಡು ಅದನ್ನು ನನಸೂ ಮಾಡಿಕೊಂಡ ಹಠವಾದಿ ಚಿಂದೋಡಿ ಲೀಲಾ ಕನ್ನಡ ವೃತ್ತಿರಂಗಭೂಮಿಯಲ್ಲಿ ದೊಡ್ಡ ಹೆಜ್ಜೆ ಗುರುತುಗಳನ್ನು ಮೂಡಿಸಿ ಮರೆಯಾಗಿದ್ದಾರೆ.

ಮುಕ್ಕಾಲು ಶತಮಾನ ಕಾಲ ಹಳ್ಳಿಹುಡುಗಿ, ಗುಣಸಾಗರಿ, ಚಿತ್ರಾಂಗದಾ ಮುಂತಾದ ನೂರಾರು ನಾಟಕಗಳ ಸಹಸ್ರ ಸಹಸ್ರ ಪ್ರಯೋಗಗಳ ಮೂಲಕ ಕರ್ನಾಟಕದ ಮನೆ ಮಾತಾದ ಲೀಲಾ ತಮ್ಮ ಅಪ್ರತಿಮ ಚೆಲುವು, ಅಭಿನಯಗಳಿಂದ ಕನ್ನಡ ರಸಿಕರ ಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಬೆಂಗಳೂರಿನ ಗುಬ್ಬಿವೀರಣ್ಣ ರಂಗಮಂದಿರದಲ್ಲಿ ಪೊಲೀಸನ ಮಗಳು ನಾಟಕದ ಗಿನ್ನಿಸ್ ದಾಖಲೆ, ಬೆಳಗಾವಿಯಲ್ಲಿ ಸತತ 10 ವರ್ಷ ರಂಗಪ್ರಯೋಗದ ಕನ್ನಡ ಸ್ವಾಭಿಮಾನಿ ಹೋರಾಟ, ನಾಟಕ ಅಕಾಡೆಮಿ ಸೇರಿದಂತೆ ಹಲವು ಸಂಘ-ಸಂಸ್ಥೆಗಳ ನೇತಾರರಾಗಿ ಕೈಕೊಂಡ ರಂಗಚಳವಳಿ, ಬೆಳಗಾವಿ, ದಾವಣಗೆರೆಯಲ್ಲಿ ರಂಗಮಂದಿರಗಳನ್ನು ನಿರ್ಮಿಸಿದ ದಾಖಲೆ ಚಿಂದೋಡಿ ಲೀಲಾ ಅವರದ್ದು.